**<u>ದಿನಾಂಕಃ 23-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ .

ಸಾಕ್ಷಿಯು ನಿಪಿ-19 ಪ್ರಮಾಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎನ್ ಡಿ ವಕೀಲರಿಂದಃ</u>**

1. ಅರ್ಜಿದಾರರಿಗೆ ಅಪಘಾತವಾದ ತಕ್ಷಣ ನಾನು ಯಾವುದೆ ಚಿಕಿತ್ಸೆ ನೀಡಿರುವುದಿಲ್ಲ. ನಾನು ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಈ ರೀತಿ ನಾನು ಅನೇಕ ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಅಪಘಾತವಾದ ತಕ್ಷಣ ತೆಗೆದ ಎಕ್ಸರೆಗಳನ್ನು ನಾನು ನೋಡಿರುವುದಿಲ್ಲ. ಆ ಎಕ್ಸರೆಗಳನ್ನು ನೋಡಿದಾಗ ಮಾತ್ರ ಯಾವ ರೀತಿಯ ಮೂಳೆ ಮುರಿತ ಆಗಿದೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ನಾನು ಕೇವಲ ಗಾಯದ ಪ್ರಮಾಣ ಪತ್ರ ಹಾಗೂ ಡಿಸ್ಚಾರ್ಜ ಸಮರಿ ಆಧಾರದ ಮೇಲೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಅರ್ಜಿದಾರರನ್ನು ಪರೀಕ್ಷೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ-14 ಎಕ್ಸರೆ ಪಿಲ್ಮನಲ್ಲಿ ಮೂಳೆ ಮುರಿತದ ಕುರುಹು ಇಲ್ಲ ಎಂದರೆ ಸಾಕ್ಷಿ ಮೂಳೆ ಮುರಿತ ಕಂಡು ಬರುತ್ತದೆ ಎಂದು ಹೇಳುತ್ತಾರೆ. ನಿಪಿ-14 ರ ಜೊತೆ ಕ್ಷ ಕಿರಣ ತಜ್ಞರ ಅಭಿಪ್ರಾಯ ಇಲ್ಲ ಎಂದರೆ ಸರಿ. ನಮ್ಮ ಆಸ್ಪತ್ರೆಗೆ ಬರುವ ರೋಗಿಗಳಿಗೆ ಎಕ್ಸರೆ ತೆಗೆದು ವರದಿ ನೀಡುವಂತೆ ಕ್ಷ ಕಿರಣ ತಜ್ಞರಿಗೆ ಕಳುಹಿಸಿಕೊಡುತ್ತೇವೆ ಎಂದರೆ ಸರಿ. ಆ ರೀತಿ ಕಳುಹಿಸಿದಾಗ ಎಕ್ಸರೆ ಜೊತೆ ತಮ್ಮ ಅಭಿಪ್ರಾಯವನ್ನು ಸಹ ಕೊಡುತ್ತಾರೆ ಎಂದರೆ ಸರಿ. ಆದರೆ ನಿಪಿ-14 ರ ಜೊತೆ ಯಾವುದೆ ಕ್ಷ ಕಿರಣ ತಜ್ಞರ ಯಾವುದೆ ಅಭಿಪ್ರಾಯ ಇಲ್ಲ ಎಂದರೆ ಸರಿ. ನಿಪಿ-14 ಅರ್ಜಿದಾರರಿಗೆ ಸಂಬಂಧಪಟ್ಟ ಎಕ್ಸರೆ ಅಲ್ಲ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ಎಲ್ಲಿಯೂ ಸಹ ಆಪರೇಶನ್ ಆದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಒಂದು ಕೈಗೆ ಕೆ ವೈಯರ್ ಹಾಗೂ ಇನ್ನೊಂದು ಕೈಗೆ ಪ್ಲೇಟ್ ಅಳವಡಿಸಿದ ಬಗ್ಗೆ ನಮೂದು ಇರುತ್ತದೆ ಎಂದು ಹೇಳುತ್ತಾರೆ. ಪ್ಲೇಟನ್ನು ಒಂದು ಬೋನ್ ಗೆ ಅಳವಡಿಸಿರುತ್ತಾರೆ ಎಂದರೆ ಸರಿ. ಅರ್ಜಿದಾರರು ವಯಸ್ಕರಾಗಿದ್ದರಿಂದ ಬೇಗನೇ ಮೂಳೆಗಳು ಸರಿಯಾಗಿ ಕೂಡಿಕೊಳ್ಳುತ್ತವೆ ಎಂದರೆ

ಸರಿ. ಮೂಳೆ ಮುರಿತದ ವಿಧದ ಮೇಲೆ ಅಂಗನ್ಯೂನ್ಯತೆ ನಿರ್ಧಾರವಾಗುತ್ತದೆ ಎಂದರೆ ಸರಿ. ನಿಪಿ-8 ರಲ್ಲಿ ಯಾವ ರೀತಿಯ ಮೂಳೆ ಮುರಿತ ಆಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಯಾವುದೆ ಮೂಳೆ ಮುರಿತ ಆಗಿರದೆ ಇದ್ದರುಾ ಸಹ ಖೊಟ್ಟಿ ದಾಖಲೆ ಸೃಷ್ಠಿಸಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮೊಬಿಲಿಟಿ ಮತ್ತು ಸ್ಟೇಂತ್ ಬಗ್ಗೆ ಹೆಚ್ಚಿನ ಪ್ರಮಾಣದ ಅಂಕಿ ಸಂಖ್ಯೆ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆ ಪ್ರಮಾಣ ವೈದ್ಯರಿಂದ ವೈದ್ಯರಿಗೆ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಮೂಳೆಯ ಜೊಯಿಂಟ್ ಬಿಟ್ಟಾಗ ಮಾತ್ರ ಕೆ ವೈಯರ್ ಹಾಕಬಹುದು ಆದರೆ ಮೂಳೆ ಮುರಿತ ಆದಾಗ ಕೆ ವೈಯರ್ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಎಕ್ಸರೆ ಪಿಲ್ಮನಲ್ಲಿ ಎಲ್ಲಿಯೂ ಸಹ ಮೂಳೆ ಮುರಿತದ ಕುರುಹು ಇಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರೂ ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಶೇ 60 ರಷ್ಟು ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.